# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ರಾಜ್ಯದ ಜಿಲ್ಲಾ ಪಂಚಾಯತ್ ಚುನಾಯಿತ ಅಧ್ಯಕ್ಷರುಗಳಿಗೆ 2016-17ನೇ ಆರ್ಥಿಕ ಸಾಲಿನ ಅರ್ಧವಾರ್ಷಿಕ ಮೇ-**2016ರ** ಮಾಹೆಯಿಂದ ಅಕ್ಟೋಬರ್-2016 ಮಾಹೆ ವರೆಗಿನ ಅವಧಿಗೆ ಮಾಸಿಕ ಗೌರವಧನ ಹಾಗೂ ಇತರೆ ಉಪಲಬ್ಧಗಳನ್ನು ಬಿಡುಗಡೆಗೊಳಿಸುವ ಕುರಿತು.

**ಓದಲಾಗಿದೆ,**

1. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 75 ಜಿಪಸ 2016, ದಿನಾಂಕ:19-11-2016.
2. ಸರ್ಕಾರದ ಆದೇಶ ಸಂಖ್ಯೆ:ಗ್ರಾಅಪ 149 ಕೆಎಸ್ಎಸ್ 2016, ದಿನಾಂಕ:24-09-2016.

**ಪ್ರಸ್ತಾವನೆ:**

ಮೇಲೆ ಓದಲಾದ ಆದೇಶದಲ್ಲಿ ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ, 1993ರ ತಿದ್ದುಪಡಿ ಅಧಿನಿಯಮ 2015ರ ಕಂಡಿಕೆ 46ರಲ್ಲಿನ ಸೆಕ್ಷನ್ 178ರಲ್ಲಿ ರಾಜ್ಯದ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳಿಗೆ ರಾಜ್ಯ ಸಚಿವರ ಸ್ಥಾನಮಾನ ಕಲ್ಪಿಸಿರುವುದರಿಂದ ಅವರುಗಳಿಗೆ ಪ್ರಾಪ್ತವಾಗುವ ಸೌಲಭ್ಯಗಳ ಬಗ್ಗೆ ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ 2ರ ಸರ್ಕಾರದ ಆದೇಶದಲ್ಲಿ ಈಗಾಗಲೇ ವಾಹನ ಸೌಲಭ್ಯ ರೂ.11.00ಲಕ್ಷಗಳನ್ನು ಆಯಾಯ ಜಿಲ್ಲಾ ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಮಂಜೂರಾತಿ ನೀಡಿದೆ. ಈಗ ಹೆಚ್ಚುವರಿಯಗಿ ರೂ.5ಲಕ್ಷಗಳ ಅನುದಾನವೂ ಸೇರಿ ಒಟ್ಟು 16ಲಕ್ಷಗಳ ಅನುದಾನದಲ್ಲಿ ಖರೀದಿಸಲು ಸಹ ಆಯಾಯ ಜಿಲ್ಲಾ ಪಂಚಾಯತಿಗಳಲ್ಲಿ ಲಭ್ಯವಿರುವ ಅನುದಾನದಲ್ಲಿ ಖರೀದಿಸಲು ಮಂಜೂರಾತಿ ಬಗ್ಗೆ ಪ್ರತ್ಯೇಕ ಆದೇಶ ಹೊರಡಿಸಲಾಗುವುದು.

ಈ ಕಾರಣಗಳಿಂದ, 2016-17ನೇ ಸಾಲಿಗೆ ಬೇಕಾಗಿರುವ ಆಯವ್ಯಯದ ಅಂದಾಜಿನ ಬಗ್ಗೆ ಆರ್ಥಿಕ ಇಲಾಖೆಯೊಂದಿಗೆ ಸಮಾಲೋಚಿಸಲಾಗಿ, ಆರ್ಥಿಕ ಇಲಾಖೆಯ ಲೆಕ್ಕ ಶೀರ್ಷಿಕೆ:2515-00-196-1-05-300(ಯೋಜನೇತರ)(ಜಿಲ್ಲಾ ಪಂಚಾಯತ್ ಲೆಕ್ಕಶೀರ್ಷಿಕೆ:2515-00-101-0-35-324 ರಡಿ ರೂ.10ಕೋಟಿಗಳನ್ನು ಪೂರಕ ಅಂದಾಜು 1ರಲ್ಲಿ ಹೆಚ್ಚುವರಿಯಾಗಿ ಒದಗಿಸಲಾಗಿದೆ.

| ಕ್ರಮ. ಸಂ | ವಿವರ | ಭತ್ಯೆ |
|---|---|---|
| 1. | ಗೌರವಧನ | ರೂ.35,0000 |
| 2. | ಮನೆ ಬಾಡಿಗೆ<br>ಬೆಂಗಳೂರು<br>ರಾಜ್ಯದ ಇತರೆ | <br>ರೂ.20,000<br>ರೂ.15,000<br>(ಲೋಕೋಪಯೋಗಿ ಇಲಾಖೆಯ ಮೌಲ್ಯಮಾಪನಕ್ಕೆ ಒಳಪಟ್ಟು ಬೆಂಗಳೂರು ನಗರದಲ್ಲಿ ಮಾಸಿಕ ರೂ.40,000 ಹಾಗೂ ಇತರೆ ನಗರಗಳಲ್ಲಿ ಮಾಸಿಕ ರೂ.20,000 ಗರಿಷ್ಟ ಮನೆ ಬಾಡಿಗೆಯನ್ನು ಪಡೆಯಬಹುದಾಗಿದೆ.) |
| 3. | ಆತಿಥ್ಯ ಭತ್ಯೆ (ವಾರ್ಷಿಕ) | ರೂ.2,00,000 |
| 4. | ಇಂಧನ ವೆಚ್ಚ (ಮಾಹೆಯಾನ) | 550 ಲೀ |
| 5. | ದಿನ ಭತ್ಯೆ | ರಾಜ್ಯದ ಒಳಗೆ ದಿನ ಒಂದಕ್ಕೆ ರೂ.2,000(ಪ್ರತಿ ತಿಂಗಳಿಗೆ 20 ದಿನ ಮೀರದಂತೆ) ರಾಜ್ಯದ ಹೊರಗೆ ದಿನ ಒಂದಕ್ಕೆ ರೂ.2,500. (ಅವಶ್ಯವಿದ್ದಲ್ಲಿ ಮಾತ್ರ ಸರ್ಕಾರದ ಪೂರ್ವಾನುಮೋದನೆಯನ್ನು ಪಡೆದು) |

| | | |
|---|---|---|
| 6. | ದೂರವಾಣಿ | ಒಂದು ನಿವಾಸ ದೂರವಾಣಿಯನ್ನು ಅಧ್ಯಕ್ಷರ ಸ್ವಂತ ನಿವಾಸದಲ್ಲಿ/ಬಾಡಿಗೆ ಪಡೆದ ನಿವಾಸದಲ್ಲಿ. |
| 7. | ಆಪ್ತ ಸಿಬ್ಬಂಧಿ | ರಾಜ್ಯ ಸಚಿವರಿಗೆ ನೀಡಲಾಗುವ ಮಾದರಿಯಲ್ಲಿ. |

ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳಿಗೆ ಗೌರವಧನ ಮತ್ತು ಇತರೆ ಉಪಲಬ್ಧಗಳನ್ನು 2016ರ ಮೇ ತಿಂಗಳಿನಿಂದ ಅಕ್ಟೋಬರ್ ತಿಂಗಳ ವರೆಗೆ ಪಾವತಿಸಲು ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರವು ನಿರ್ಣಯಿಸಿದೆ. ಆದುದರಿಂದ ಈ ಆದೇಶ.

**<u>ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 75 ಜಿಪಸ 2016, ಬೆಂಗಳೂರು, ದಿನಾಂಕ:08-12-2016</u>**

ಮೇಲೆ ವಿವರಿಸಿರುವ ಕಾರಣಗಳ ಹಿನ್ನಲೆಯಲ್ಲಿ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್ ಅಧ್ಯಕ್ಷರುಗಳಿಗೆ ಈ ಕೆಳಕಂಡ ಸೌಲಭ್ಯಗಳನ್ನು ವಿಸ್ತರಿಸಲು ಸರ್ಕಾರವು ಆದೇಶಿಸಿದೆ.

2016-17ನೇ ಆರ್ಥಿಕ ಸಾಲಿನ ಅರ್ಧವಾರ್ಷಿಕ ಅವಧಿ ಮೇ-2016ರ ಮಾಹೆಯಿಂದ ಅಕ್ಟೋಬರ್-2016ರ ಮಾಹೆವರೆಗೆ ಮಾಸಿಕ ಗೌರವಧನ ಹಾಗೂ ಇತರೆ ಭತ್ಯೆಗಳನ್ನು ಪಾವತಿಸಲು ಲೆಕ್ಕ ಶೀರ್ಷಿಕೆ:**2515-00-196-1-05-300(2515-00-101-0-35-324)**(ಯೋಜನೇತರ)ರಡಿ ಒದಗಿಸಲಾದ ರೂ.**10ಕೋಟಿ**ಗಳಲ್ಲಿ **ರೂ5,12,40,000**(ರೂಪಾಯಿ ಐದು ಕೋಟಿ ಹನ್ನೆರಡು ಲಕ್ಷದ ನಲವತ್ತು ಸಾವಿರ ರೂಗಳು ಮಾತ್ರ)ಗಳ ಅನುದಾನವನ್ನು ಬಿಡುಗಡೆಗೊಳಿಸಿ ಆದೇಶಿಸಲಾಗಿದೆ.

ಜಿಲ್ಲಾ ಪಂಚಾಯತ್‌ಗಳ ಅಧ್ಯಕ್ಷರುಗಳಿಗೆ ಬಿಡುಗಡೆಗೊಳಿಸಿರುವ ಅನುದಾನವನ್ನು ಈ ಆದೇಶದೊಂದಿಗೆ ಲಗತ್ತಿಸಿದ ಅನುಬಂಧ- 1ರಲ್ಲಿ ನೀಡಿದೆ. ಜಿಲ್ಲಾವಾರು ಗೌರವಧನ ಇತರೆ ಉಪಲಬ್ಧಗಳನ್ನು ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್-ಹಣ ಸೆಳೆಯುವ ಮತ್ತು ಬಟವಾಡೆ ಮಾಡುವ ಕೋಡ್)ಕೋಡ್‌ಗಳಿಗೆ ರಾಜ್ಯ ಖಜಾನೆ ಗಣಕಜಾಲ ನಿರ್ವಹಣಾ ಕೇಂದ್ರ, ಬೆಂಗಳೂರು (ಟಿ.ಎನ್.ಎಮ್.ಸಿ) ಮೂಲಕ ಅಪ್‌ಲೋಡ್ ಮಾಡಲು ಸರ್ಕಾರದ ಅಧೀನ **ಕಾರ್ಯದರ್ಶಿ(ಜಿ.ಪಂ.)**, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರಿಗೆ ಅನುಮತಿಸಿದೆ.

**<u>ಮಾಸಿಕ ಗೌರವಧನ ಮತ್ತು ಇತರೆ ಉಪಲಬ್ಧಗಳನ್ನು ಚುನಾಯಿತ ಪ್ರತಿನಿಧಿಗಳಿಗೆ ಈ ಕೆಳಕಂಡ ಷರತ್ತಿಗೊಳಪಟ್ಟು ಪಾವತಿಸುವುದು.</u>**

1) ಈ ಆದೇಶದ ಅನುಬಂಧ-1ರಲ್ಲಿ ನಮೂಧಿಸಿರುವ ಆಯಾ ಜಿಲ್ಲೆಗಳ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಡಿ.ಡಿ.ಓ (ಡ್ರಾಯಿಂಗ್ ಅಂಡ್ ಡಿಸ್ಬರ್ಸಿಂಗ್ ಕೋಡ್) ಕೋಡ್‌ಗಳಿಗೆ ಅಪ್‌ಲೋಡ್ ಮಾಡಿರುವುದರಿಂದ ಜಿಲ್ಲಾ ಪಂಚಾಯತಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಖಜಾನೆಯಿಂದ ತಮ್ಮ ತಮ್ಮ ಮೊತ್ತಗಳನ್ನು ಸೆಳೆಯುವುದು.

2) ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ತಮ್ಮ ಜಿಲ್ಲಾ ವ್ಯಾಪ್ತಿಯ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ನೀಡಬೇಕಾಗಿರುವ ಮೊತ್ತಗಳನ್ನು ಲೆಕ್ಕಹಾಕಿ ಅಂತಹ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಬ್ಯಾಂಕ್ ಉಳಿತಾಯ ಖಾತೆಗಳಿಗೆ ಆರ್.ಟಿ.ಜಿ.ಎಸ್/ಎನ್.ಇ.ಎಫ್.ಟಿ ವಿಧಾನದ ಮೂಲಕ ವರ್ಗಾಯಿಸಿ ಚುನಾಯಿತ ಅಧ್ಯಕ್ಷರುಗಳಿಗೆ ಮಾಸಿಕ ಗೌರವಧನ ಹಾಗೂ ಇತರೆ ಉಪಲಬ್ಧಗಳನ್ನು ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳುವುದು. ಈ ಆದೇಶದ ಮೂಲಕ ಬಿಡುಗಡೆಗೊಳಿಸಿದ ಮೊತ್ತಗಳನ್ನು ಜಿಲ್ಲಾ ಪಂಚಾಯತಿಗಳ ಚುನಾಯಿತ ಅಧ್ಯಕ್ಷರುಗಳಿಗೆ ಮೇ-2016ರ ಮಾಹೆಯಿಂದ ಅಕ್ಟೋಬರ್-2016ರ ಮಾಹೆಗೆ ಮಾಸಿಕ ಗೌರವಧನ ಹಾಗೂ ಇತರೆ ಭತ್ಯೆಗಳನ್ನು ನಿಯಮಾನುಸಾರ ಪಾವತಿಸಲು ಮಾತ್ರ ವಿನಿಯೋಗಿಸುವುದು. ಅನ್ಯ ಉದ್ದೇಶಕ್ಕಾಗಿ ವಿನಿಯೋಗಿಸತಕ್ಕದ್ದಲ್ಲ.

3) ಜಿಲ್ಲಾ ಪಂಚಾಯತ್‌ನ ಅಧ್ಯಕ್ಷರುಗಳಿಗೆ ಈಗಾಗಲೇ ಏಪ್ರಿಲ್-2016 ರಿಂದ ಸೆಪ್ಟೆಂಬರ್ 2016ರಲ್ಲಿ ನೀಡಿರುವ ಗೌರವಧನವನ್ನು ಸರಿದೂಗಿಸಿಕೊಳ್ಳುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 263 ವೆಚ್ಚ 6/2016, ದಿನಾಂಕ:17-06-2016 ಮತ್ತು ದಿನಾಂಕ:28-06-2016ರ ಅನಧಿಕೃತ ಟಿಪ್ಪಣಿಯಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

8.12.16

ಇವರಿಗೆ:

1. ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2. ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು.
3. ನಿರ್ದೇಶಕರು, ರಾಜ್ಯ ಹುಜೂರ್ ಖಜಾನೆ, ಬೆಂಗಳೂರು.
4. ಉಪ ನಿರ್ದೇಶಕರು, ಖಜಾನೆ ಗಣಕ ಜಾಲ ನಿರ್ವಹಣಾ ಕೇಂದ್ರ, ಖನಿಜ ಭವನ, ಬೆಂಗಳೂರು.
5. ಜಿಲ್ಲಾ ಖಜಾನಾಧಿಕಾರಿಗಳು, ರಾಜ್ಯದ ಎಲ್ಲಾ ಜಿಲ್ಲೆಗಳು.
6. ವಿಶೇಷಾಧಿಕಾರಿ, ಆರ್ಥಿಕ ಇಲಾಖೆ (ವೆಚ್ಚ-6), ವಿಧಾನ ಸೌಧ, ಬೆಂಗಳೂರು.
7. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
8. ರಾಜ್ಯದ ಎಲ್ಲಾ ಗ್ರಾಮ ಪಂಚಾಯತಿಗಳ ಪಂಚಾಯತಿ ಅಭಿವೃದ್ಧಿ ಅಧಿಕಾರಿಗಳು (ಆಯಾ ತಾಲ್ಲೂಕು ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೂಲಕ).
9. ಗಣಕ ಕೋಶ - ಇಲಾಖಾ ವೆಬ್‌ಸೈಟ್‌ನಲ್ಲಿ ಅಳವಡಿಸಲು.
10. ಮುಖ್ಯ ಸಂಪಾದಕರು, ಕರ್ನಾಟಕ ವಿಕಾಸ ಮಾಸ ಪತ್ರಿಕೆ - ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು.
11. ಶಾಖಾ ರಕ್ಷಾ ಕಡತಕ್ಕೆ/ಹೆಚ್ಚುವರಿ ಪ್ರತಿ.

ಪ್ರತಿ:

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
2. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು (ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿಗಳು, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಅನುಬಂಧ - 1

ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತಿಗಳ ಅಧ್ಯಕ್ಷರುಗಳಿಗೆ
**2016-17ನೇ ಆರ್ಥಿಕ ಸಾಲಿನ ಮೇ ರಿಂದ ಅಕ್ಟೋಬರ್-2016ರ ಮಾಹೆಯ ಅವಧಿಗೆ ನೀಡಬೇಕಾಗಿರುವ ಗೌರವ ಧನ ಮತ್ತು ಇತರೆ ಉಪಲಬ್ದ ವಿವರಗಳು ಸರ್ಕಾರದ ಆದೇಶ**
**ಸಂಖ್ಯೆ: ಗ್ರಾಅಪ 75 ಜಿಪಸ 2016, ಬೆಂಗಳೂರು, ದಿನಾಂಕ:08-12-2016**

(ರೂ. ಗಳಲ್ಲಿ)

| ಕ್ರ ಸಂ. | ಜಿಲ್ಲೆಯ ಹೆಸರು | ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳ ಸಂಖ್ಯೆ | ಆರು ತಿಂಗಳಿಗೆ ಜಿಲ್ಲಾ ಪಂಚಾಯತಿ ಅಧ್ಯಕ್ಷರುಗಳಿಗೆ ನೀಡಬೇಕಾಗಿರುವ ಗೌರವಧನ ಮತ್ತು ಉಪಲಬ್ದಗಳು |
|---|---|---|---|
| 1 | ಬೆಂಗಳೂರು ನಗರ | 1 | 1820000.00 |
| 2 | ಬೆಂಗಳೂರು ಗ್ರಾಮಾಂತರ | 1 | 1820000.00 |
| 3 | ರಾಮನಗರ | 1 | 1700000.00 |
| 4 | ಕೋಲಾರ | 1 | 1700000.00 |
| 5 | ಚಿಕ್ಕಬಳ್ಳಾಪುರ | 1 | 1700000.00 |
| 6 | ತುಮಕೂರು | 1 | 1700000.00 |
| 7 | ಚಿತ್ರದುರ್ಗ | 1 | 1700000.00 |
| 8 | ದಾವಣಗೆರೆ | 1 | 1700000.00 |
| 9 | ಶಿವಮೊಗ್ಗ | 1 | 1700000.00 |
| 10 | ಮೈಸೂರು | 1 | 1700000.00 |
| 11 | ಚಾಮರಾಜನಗರ | 1 | 1700000.00 |
| 12 | ಹಾಸನ | 1 | 1700000.00 |
| 13 | ಕೊಡಗು | 1 | 1700000.00 |
| 14 | ಮಂಡ್ಯ | 1 | 1700000.00 |
| 15 | ಚಿಕ್ಕಮಗಳೂರು | 1 | 1700000.00 |
| 16 | ಉಡುಪಿ | 1 | 1700000.00 |
| 17 | ದಕ್ಷಿಣ ಕನ್ನಡ | 1 | 1700000.00 |
| 18 | ಬೆಳಗಾವಿ | 1 | 1700000.00 |
| 19 | ವಿಜಯಪುರ | 1 | 1700000.00 |
| 20 | ಬಾಗಲಕೋಟೆ | 1 | 1700000.00 |
| 21 | ಧಾರವಾಡ | 1 | 1700000.00 |
| 22 | ಗದಗ | 1 | 1700000.00 |
| 23 | ಹಾವೇರಿ | 1 | 1700000.00 |
| 24 | ಉತ್ತರ ಕನ್ನಡ | 1 | 1700000.00 |
| 25 | ಬೀದರ್ | 1 | 1700000.00 |
| 26 | ಬಳ್ಳಾರಿ | 1 | 1700000.00 |
| 27 | ರಾಯಚೂರು | 1 | 1700000.00 |
| 28 | ಕಲಬುರ್ಗಿ | 1 | 1700000.00 |
| 29 | ಯಾದಗಿರಿ | 1 | 1700000.00 |
| 30 | ಕೊಪ್ಪಳ | 1 | 1700000.00 |
| **ಒಟ್ಟು** | | **30** | **51240000.00** |

ಒಟ್ಟು (ಐದು ಕೋಟಿ ಹನ್ನೆರಡು ಲಕ್ಷದ ನಲವತ್ತು ಸಾವಿರ ರೂಪಾಯಿಗಳು ಮಾತ್ರ)

(ಪಿ.ದೇವಸಹಾಯಂ)
ಸರ್ಕಾರದ ಅಧೀನ ಕಾರ್ಯದರ್ಶಿ(ಜಿ.ಪಂ)(ಪ್ರ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ

8.12.16

Su(Shashi)Honorarium July-Septermber